ಸರ್ಕಾರದ ಕಾರ್ಯದರ್ಶಿಗಳು ಗ್ರಾಮೀಣ ಅಭಿವೃದ್ಧಿಯ ಮತ್ತು ಪಂಚಾಯತ್ ರಾಜ್ಯ ಇಲಾಖೆಯವರು ದಿನಾಂಕ 6.1.63 ರಂದು ವರದಿಯನ್ನು ಸಲ್ಲಿಸಿದ್ದಾರೆ. ಅವರು 6ನೇ ತಾರೀಖು ವರದಿ ಸಲ್ಲಿಸಿದ್ದಾರೆ. ಸದರಿ ವಿಷಯವನ್ನು ಲೋಕಾಯುಕ್ತಕ್ಕೆ ವಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಮೊನ್ನೆ 6ನೇ ತಾರೀಖು ರಿಪೋರ್ಟ್ ಬಂದಿದೆ. ಸೆಕ್ರೆಟರಿ, ಕಾರ್ಯದರ್ಶಿ, ಪಂಚಾಯತ್‌ರಾಜ್ಯ ವ್ಯವಸ್ಥೆಯಿಂದ ಅದನ್ನು ಲೋಕಾಯುಕ್ತಕ್ಕೆ ಕಳುಹಿಸುವುದಕ್ಕೆ ಈಗ ಪ್ರೊಸೆಸ್ ಮಾಡುತ್ತಾ ಇದ್ದರೆ, ಪ್ರಕ್ರಿಯೆಗಳು ನಡೆಯುತ್ತಾ ಇವೆ. ಆದುದರಿಂದ ಈ ಸರ್ಕಾರದ ವಿಚಾರದಲ್ಲಿ ನೀವು ಸಂಶಯ ಪಡತಕ್ಕಂಥ ವಿಚಾರವೇನೂ ಇಲ್ಲ. ಇದರಲ್ಲಿ ಬಹಳ ತೀವ್ರವಾದಂಥ ಕ್ರಮವನ್ನು ನಡೆಸಿದ್ದಾರಲ್ಲ ನಿಮ್ಮ ಆತುರವೇನು ಅಂದರೆ ಸಸ್‌ಪೆಂಡ್ ಮಾಡಿಸಬೇಕು ಎಂದು ಅವರನ್ನು ಸರಿ ಸಸ್‌ಪೆಂಡ್ ಮಾಡಿಸಬೇಕೆಂದು ಯೋಚನೆ ಮಾಡಿ.

ಶ್ರೀ ಸಿ. ಬೈರೆಗೌಡ:- ಅಧ್ಯಕ್ಷರೇ ಅವರೇ ಹೇಳಲಿ.

ಶ್ರೀ ಕೆ.ಹೆಚ್. ರಂಗನಾಥ್:- ಅಧ್ಯಕ್ಷರೇ ಮಾನ್ಯ ಸದಸ್ಯರು ಮಂತ್ರಿಗಳಾಗಿದ್ದಂಥವರು ಮೇಲಾಗಿ ಈ ಅಧಿಕಾರಿ ನನ್ನ ಇಲಾಖೆಯಲ್ಲೂ ಇಲ್ಲ. ಹೆಚ್.ಯು.ಡಿ ಗೆ ಅವರು ಡೆಪ್ಯುಟೇಷನ್ ಹೋಗಿ, ಬಿಡಿಎಗೆ ಹೋಗಿದ್ದಾರೆ. ತಾವು ಗಮನಹರಿಸದಂಥ ಅಪ್ರಕ್ರೀಯೆ ನಡೆದಿದೆ. ನಿನ್ನೆ ಮೊನ್ನೆ ರಜೆ, ಸೆಕೆಂಡ್ ಸಾರ್ಟಡೇ ಸಂಡೇ ಇವತ್ತು ಏನಾಗುತ್ತದೆ ನೋಡಿ. ನಾಳೆ ಇನ್ನು ಇರುತ್ತೀರಲ್ಲ.

ಶ್ರೀ ಸಿ. ಬೈರೇಗೌಡ:- ಸಸ್‌ಪೆಂಡ್ ಮಾಡಿದರೆ ಸಂತೋಷ.

ಶ್ರೀ ಕೆ.ಹೆಚ್. ರಂಗನಾಥ್:- ಹಾಗೆಂದು ಹೇಳಿ. ಸದನದಲ್ಲಿ ಮಾಡಿದ್ದೇವೆಂದು ಎಲ್ಲಾ ಸರಿ ಹೋಗುವುದಿಲ್ಲ. ಅದು ಕ್ರಮವೂ ಅಲ್ಲ. ಕಾನೂನು ಇದೆ, ಕಾನೂನು ಪ್ರಕಾರ ನೋಡಿ ಮಾಡಬೇಕಾಗುತ್ತದೆ.

**(2) ಚಿಕ್ಕಮಗಳೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಬಗರ್ ಹುಕ್ಕುಂ ಜಮೀನಿನ ಸಕ್ರಮ.**

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಅಧ್ಯಕ್ಷರೇ ನಾನು ಚಿಕ್ಕಮಗಳೂರು ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಭೂಮಿ ಇಲ್ಲದ ಬಡವರು, ಹರಿಜನ ಗಿರಿಜನರು ಏನು ಕಾಫಿ ಬಗರ್ ಹುಕ್ಕುಂ ಜಮೀನಿನಲ್ಲಿ ಮಾಡಿದ್ದಾರೆ. ಅದನ್ನು ಸಕ್ರಮಗೊಳಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಕರ್ನಾಟಕ ಭೂ ಕಂದಾಯ ಕಾಯಿದೆ ಪ್ರಕರಣ 94ಎ ಆಡಿಯಲ್ಲಿ ಪ್ಲಾಂಟೇಷನ್ ಜಮೀನುಗಳನ್ನು ಸಕ್ರಮೀಕರಿಸಲು: ಮಂಜೂರಾತಿ ಮಾಡಲು ಬರುವುದಿಲ್ಲ. ಮುಂದೆ ಆದಾಗ್ಯೂ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಇತರೆ ಪ್ಲಾಂಟೇಷನ್ ಅಂದರೆ ಏಲಕ್ಕಿ, ಕಾಫಿ, ಮೆಣಸು, ರಬ್ಬರ್, ಟೀ ಇತ್ಯಾದಿ ಜಮೀನುಗಳನ್ನು ಸಕ್ರಮಗೊಳಿಸಲು ಬರುವುದಿಲ್ಲವಾಗಿರುತ್ತದೆ. ಆದುದರಿಂದ ಪ್ಲಾಂಟೇಷನ್ ಬೆಳೆಗಳ ಬಗರ್ ಹುಕ್ಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. ಈ ಯೋಜನೆಯು ಬಡ ಭೂರಹಿತರು, ವ್ಯವಸಾಯ ಕಾರ್ಮಿಕರು ಹಾಗೂ ರೈತರಿಗೆ ಮಾತ್ರ ಅನ್ವಯಿಸುತ್ತದೆ. ಸರ್ಕಾರಕ್ಕೆ ಲಭ್ಯವಿರುವ ಮಾಹಿತಿಪ್ರಕಾರ ಪ್ಲಾಂಟೇಷನ್ ಜಮೀನುಗಳನ್ನು ಅತಿಕ್ರಮಣ ಮಾಡಿರುವುದು ಮುಖ್ಯವಾಗಿ ದೊಡ್ಡ ರೈತರು ಮತ್ತು ದೊಡ್ಡ ಪ್ಲಾಂಟರ್ಸ್ ಆಗಿರುವುದರಿಂದ ವ್ಯವಸಾಯಕ್ಕೆ ಸಂಬಂಧಿಸಿದ ಜಮೀನುಗಳನ್ನು ಮಾತ್ರ ಸಕ್ರಮಗೊಳಿಸಲು ಯೋಜಿಸಲಾಗಿದೆ. ಲಭ್ಯವಿರುವ ಮಾಹಿತಿಯ ಪ್ರಕಾರ ಒತ್ತುವರಿಯಾದ ಪ್ಲಾಂಟೇಷನ್ ಜಮೀನುಗಳ ವಿವರ ಈ ಕೆಳಕಂಡಂತಿದೆ:-

| | | |
|---|---|---|
| ಹಾಸನ | ಜಿಲ್ಲೆ – | 5,060–00 ಎಕರೆಗಳು |
| ಕೊಡಗು | ಜಿಲ್ಲೆ – | 6,380–00 ಎಕರೆಗಳು |
| ಚಿಕ್ಕಮಂಗಳೂರು | ಜಿಲ್ಲೆ – | 17,039–00 ಎಕರೆಗಳು |
| ಒಟ್ಟು | | 28,479–00 ಎಕರೆಗಳು |

ವ್ಯವಸಾಯದ ಜಮೀನುಗಳ ಒತ್ತುವರಿಯನ್ನು ಹೋಲಿಸಿದರೆ ಪ್ಲಾಂಟೇಷನ್ ಜಮೀನುಗಳ ಒತ್ತುವರಿಯು ಕನಿಷ್ಠವಾಗಿರುತ್ತದೆ.

ಲಭ್ಯವಿರುವ ಅಂಕಿ-ಅಂಶಗಳ ಪ್ರಕಾರ ಒತ್ತುವರಿ ಮಾಡಿರುವ ಪ್ಲಾಂಟೇಷನ್ ಜಮೀನುಗಳ ವರ್ಗವಾರು ಈ ಕೆಳಕಂಡಂತಿರುತ್ತದೆ.

| | | |
|---|---|---|
| ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ | – | 1,641–30 ಎಕರೆಗಳು |
| ಭೂ ರಹಿತರು | – | 3,728–00 ಎಕರೆಗಳು |
| ಸಣ್ಣ ಹಿಡುವಳಿದಾರರು | – | 5,679–14 ಎಕರೆಗಳು |
| ಇತರರು | – | 17,430–39 ಎಕರೆಗಳು |

ಮೇಲಿನ ಅಂಕಿ-ಅಂಶಗಳ ಪ್ರಕಾರ, ಇತರರು ಒತ್ತುವರಿ ಮಾಡಿರುವ ಪ್ಲಾಂಟೇಷನ್ ಜಮೀನು ಶೇಕಡ 61ರಷ್ಟು ಇರುವುದರಿಂದ, ಈಗಿರುವ ನಿಯಮಗಳ ಯಾವುದೇ ಬದಲಾವಣೆ ಯನ್ನು ಮಾಡುವುದು ಸೂಕ್ತವಲ್ಲ.

11.50 A.M

† ಶ್ರೀಮತಿ ಮೋಟಮ್ಮ:- ಮಾನ್ಯ ಅಧ್ಯಕ್ಷರೆ, ರೆವಿನ್ಯೂ ಇಲಾಖೆಯವರು ಇದರ ಬಗ್ಗೆ ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲವೇನೋ ಎಂದು ನನಗೆ ಅನಿಸುತ್ತದೆ. ಈಗ ಇವರು ಯಾವ ಯಾವ ಜಮೀನನ್ನು ಒತ್ತುವರಿ ಮಾಡಬಾರದು ಅಥವಾ ಒತ್ತುವರಿ ಸಕ್ರಮ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಆ ಜಮೀನು ಬಗ್ಗೆ ನಾನು ಹೇಳುತ್ತಾ ಇಲ್ಲ. ನಮ್ಮಲ್ಲಿ ಲ್ಯಾಂಡ್ ಕ್ಲಾಸಿಫಿಕೇಷನ್ ಪ್ರಕಾರ ತರಿ ಇದೆ ಖುಷ್ಕಿ ಇದೆ, ಡಿ ಕ್ಲಾಸ್ ಲ್ಯಾಂಡ್ ಇದೆ ಮತ್ತು ಫಾರೆಸ್ಟ್ ಲ್ಯಾಂಡ್ ಇದೆ. ಆದರೆ ಇಲ್ಲಿ ಪ್ಲಾಂಟೇಷನ್ ಲ್ಯಾಂಡ್ ಎನ್ನುವ ಭೂಮಿಯೇ ಇಲ್ಲ. ಈ ಪ್ಲಾಂಟೇಷನ್ ಲ್ಯಾಂಡ್ ಎನ್ನುವ ಭೂಮಿ ಬದಲಾಗಿ ಕಾಫಿ ಖರಾಬತ್ ಎಂದು ಚಿಕ್ಕಮಂಗಳೂರು ಮತ್ತು ಮೂಡಿಗೆರೆ ತಾಲ್ಲೂಕಿನಲ್ಲಿ ಕರೆಯುತ್ತಾರೆ. ಹಿರಿಯ ಸದಸ್ಯರಾದ ರಂಗನಾಥ್ ಅವರಿಗೆ ಈ ಏರಿಯಾದ ಬಗ್ಗೆ ಚೆನ್ನಾಗಿ ಗೊತ್ತು. ಮತ್ತು ರೆವಿನ್ಯೂ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಕೆಲವು ಅಧಿಕಾರಿಗಳಿಗೆ ಈ ವಿಷಯ ಗೊತ್ತು. ಕಾಫಿ ಪ್ಲಾಂಟೇಷನ್ ಜಮೀನು ಎಂದು ನಮ್ಮ ಜಿಲ್ಲೆಯಲ್ಲಿ, ನಮ್ಮ ತಾಲೂಕಿನಲ್ಲಿ ಇಲ್ಲ. ಮತ್ತೆ ಕೊಡಗೂ ಹಾಸನದಲ್ಲೂ ಅದು ಇಲ್ಲ. ಕಾಫಿ ಗಿಡ ಹಾಕಿದಮೇಲೆ ಅದನ್ನು ಪ್ಲಾಂಟೇಷನ್ ಎಂದು ಹೇಳುತ್ತಾರೆ ಅಥವಾ ಎಸ್ಟೇಟ್ ಎಂದು ಹೇಳುತ್ತಾರೆ. ಅಂತಹ ಜಮೀನನ್ನು ಬಡವರು ಯಾರು ಮಾಡಿಲ್ಲ. ಈಗ ನಮ್ಮಲ್ಲಿ ಬಡವರು ಏನು ಮಾಡಿದ್ದಾರೆಂದರೆ, ಈ ತರಿ, ಖುಷ್ಕಿ, ಡಿ ಕ್ಲಾಸ್ ಮತ್ತು ಫಾರೆಸ್ಟ್ ಲ್ಯಾಂಡ್ ಎಂದು ಏನು ಇದೆ, ಅಲ್ಲಿ ಕೆಲವರು ಒತ್ತುವರಿ ಮಾಡಿಕೊಂಡು ಕುಳಿತಿದ್ದಾರೆ. ಅವರೇನೂ ಹೆಚ್ಚಿಗೆ ಒತ್ತುವರಿ ಮಾಡಿಲ್ಲ. ಮಾನ್ಯ ಕಂದಾಯ ಸಚಿವರು ಮಾತನಾಡಿದ್ದು, ನನಗೆ ಇಲ್ಲಿ ಕೊಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ದೊಡ್ಡ ಕಾಫಿ ಬೆಳಗಾರರ ಒತ್ತುವರಿ ಬಗ್ಗೆ ಹೇಳಿದ್ದಾರೆ. ಸಾಮಾನ್ಯ ಜನರು ಅರ್ಧ ಎಕರೆ ಒತ್ತುವರಿ ಮಾಡಿರಲಿ, 10 ಗುಂಟೆ ಒತ್ತುವರಿ ಮಾಡಿರಲಿ, 5 ಗುಂಟೆ 1 ಬಗರ್ ಹುಕ್ಕುಂ ಒತ್ತುವರಿ

ಮಾಡಿರಲಿ, ಅವರು 4 ಕಾಫಿ ಗಿಡ ಬೆಳೆದಿದ್ದಾರೆ. 4 ಬಾಳೆ ಗಿಡ ಬೆಳೆದಿದ್ದಾರೆ. 4ನಿಂಬೆ ಗಿಡ ಬೆಳೆದಿದ್ದಾರೆ ಮತ್ತು ಕಿತ್ತಲೆಗಿಡ ಬೆಳೆದಿದ್ದಾರೆ ಎನಿಹ ಎಕರೆಗಟ್ಟಲೆ ಕಾಫಿ ಪ್ಲಾಂಟೇಷನ್ ಮಾಡಿಲ್ಲ. ಹೀಗಿರಬೇಕಾದರೆ ಖುಷ್ಕಿ ಲ್ಯಾಂಡ್‌ನಲ್ಲಿ ಕಾಫಿ ಬೆಳೆದಿದ್ದರೆ ಏಕೆ ಅದನ್ನು ಅವರಿಗೆ ಕೊಡಬಾರದು? ಇದನ್ನು ಪ್ಲಾಂಟೇಷನ್ ಲ್ಯಾಂಡ್ ಎಂದು ಕರೆಯುವುದಕ್ಕೆ ಬರುವುದೇ ಇಲ್ಲ. ಖರಾಬಲ್ಲಿಯೇ ಕಾಫಿ ಏನಾದರೂ ಬೆಳೆದಿದ್ದರೆ 10 ಗಿಡವನ್ನೆ ಹಾಕಿರಲಿ, 5 ಗಿಡವನ್ನೆ ಹಾಕಿರಲಿ ನೀವು ಕೊಡಬೇಡಿ. ಈಗ ನಮ್ಮಲ್ಲಿ ಕಾಫಿ ಬಿಟ್ಟರೆ ರಾಗಿ ಬೆಳೆಯುವುದಕ್ಕೆ ಆಗುವುದಿಲ್ಲ. ಜೋಳ ಬೆಳೆಯುವುದಕ್ಕೆ ಆಗುವುದಿಲ್ಲ, ಸೊಯಬಿನ್ ಬೆಳೆಯುವುದಕ್ಕೆ ಆಗುವುದಿಲ್ಲ. ಇನ್ನು ಯಾವ ಬೆಳೆಯೂ ಸಾಧ್ಯವೇ ಆಗೋದಿಲ್ಲ. ಯಾವುದೇ ಬಡವ 10 ಗುಂಟೆಗೆ ಒಂದು ಮನೆ ಕಟ್ಟಿಕೊಂಡು, 10 ಗುಂಟೆ ಬೇಲಿ ಹಾಕಿಕೊಂಡು, 4 ಕಾಫಿ ಗಿಡ ಹಾಕಿದ್ದಾನೆ, 4 ಬಾಳೆ ಗಿಡ ಹಾಕಿದ್ದಾನೆ, ಕಿತ್ತಲೆ ಗಿಡ ಹಾಕಿದ್ದಾನೆ, ಅಂದ ಮಾತ್ರಕ್ಕೆ ಅದು ಪ್ಲಾಂಟೇಷನ್ ಎಂದು ಹೇಳಿ, ಇದು ಬಡವರಿಗೆ ಕೊಡಲಿಕ್ಕೆ ಬರುವುದಿಲ್ಲ ಎಂದು ಹೇಳಿದರೆ ಹೇಗೆ? ಬಡವರು ಭೂಮಿ ಇಲ್ಲದವರು ನೀವು ಏನು ಒತ್ತುವರಿ ಮಾಡಿದ್ದೀರಿ, 4 ಎಕರೆ 30 ಗುಂಟೆಯನ್ನು ನಾವು ಸಕ್ರಮ ಮಾಡಿಕೊಡುತ್ತೇವೆ ಎಂದು ಹೇಳಿ ದೊಡ್ಡ ದೊಡ್ಡ ಭಾಷಣ ಬಿಗಿದು ಜನರಿಗೆ ಭರವಸೆ ಹೇಳಿಬಿಟ್ಟು ಈಗ ನಾವು ಅವರ ಅರ್ಜಿಗಳನ್ನು ವಜಾ ಮಾಡಿದರೆ, ಜನ ನಮ್ಮನ್ನು ಕ್ಷಮಿಸುತ್ತಾರೆಯೇ? ಜನ ನಮ್ಮನ್ನು ಖಂಡಿತ ನಮ್ಮನ್ನು ಹತ್ತಿರ ಸೇರಿಸುವುದಿಲ್ಲ. ಆದುದರಿಂದ ನಾನು ತಮ್ಮ ಮೂಲಕ ಏನು ಕೇಳಿಕೊಳ್ಳುತ್ತೇನೆಂದರೆ ಈ ಖುಷ್ಕಿ, ತರಿ ಮತ್ತು ಡಿ ಕ್ಲಾಸ್ ಲ್ಯಾಂಡ್‌ನಲ್ಲಿ ಅವರುಗಳೇನು 10 ಗುಂಟೆ, 5 ಗುಂಟೆ, ಅರ್ಧ ಎಕರೆ, 1 ಎಕರೆ ಕಾಫಿ ಗಿಡ ಹಾಕಿದ್ದಾರೆ, ಅದರ ಜೊತೆಯಲ್ಲಿ ಬೇರೆ ಬೇರೆ ಬೆಳೆಯನ್ನೂ ಬೆಳೆದಿದ್ದಾರೆ. ಆ ಜಮೀನನ್ನು ತಾವು ಸಕ್ರಮ ಮಾಡಲಿಕ್ಕೆ ಅನುಮತಿ ಕೊಡಬೇಕು. ಹಿಂದಿನ ಕಂದಾಯ ಸಚಿವರು ಆಗಿದ್ದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಹೇಳಿದ್ದೆವು. ರೆವಿನ್ಯೂ ಸೆಕ್ರೆಟರಿಯವರೆನ್ನೆಲ್ಲಾ ಕರೆಯಿಸಿ ನಾವು ಇದನ್ನು ಕನ್‌ವಿನ್ಸ್ ಮಾಡಿದ್ದೆವು. ಆದರೆ ಏನೋ ತಪ್ಪು ಮಾಹಿತಿ ಇದರಲ್ಲಿ ಬಂದುಬಿಟ್ಟು ರೆವಿನ್ಯೂ ಇಲಾಖೆಯವರು ಈ ರೀತಿ ಬಡವರಿಗೆ ತೊಂದರೆ ಆಗುವಂಥ ವ್ಯವಸ್ಥೆಯಲ್ಲಿ ಇಟ್ಟಿದ್ದಾರೆ. ದಯಮಾಡಿ ಇದನ್ನು ಮಾನ್ಯ ಕಂದಾಯ ಸಚಿವರು ಮನಗಂಡು ಬಡವರು ಏನು ತರಿ, ಖುಷ್ಕಿ ಮತ್ತು ಡಿ ಕ್ಲಾಸ್ ಲ್ಯಾಂಡ್‌ನಲ್ಲಿ ಕಾಫಿ ಬೆಳೆದಿದ್ದಾರೆ. ಅವರಿಗೆ ಒತ್ತುವರಿಯನ್ನು ಸಕ್ರಮ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ನಾನು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ:- ಅಧ್ಯಕ್ಷರೆ, ಅವರು ಕಳುಹಿಸಿರತಕ್ಕಂತಹ ಈ ಸೂಚನೆ ಈ ರೀತಿ ಇದೆ. ಬಗರ್ ಹುಕ್ಕುಂ ಜಮೀನನ್ನು ಸಕ್ರಮ ಮಾಡುವಾಗ ಚಿಕ್ಕಮಗಳೂರು, ಕೊಡಗು, ಹಾಸನ ಜಿಲ್ಲೆಯಲ್ಲಿ ಹೆಚ್ಚಿಗೆ ಕಾಫಿ ಬೆಳೆಯುವ ಪ್ರದೇಶದ ಭೂಮಿಯನ್ನು ಸಕ್ರಮಗೊಳಿಸಬೇಕಾಗುತ್ತದೆ ಎಂದು ಹೇಳಿದ್ದಾರೆ. ಈ ಡಿಟೈಲ್ಸ್ ಎಲ್ಲಾ ಅವರು ಮೊದಲು ಕೊಟ್ಟಿರಲಿಲ್ಲ. ಈಗ ಕೆಲವು ಡಿಟೈಲ್ಸ್ ಕೊಟ್ಟಿದ್ದಾರೆ. We will examine it.

ಶ್ರೀಮತಿ ಮೋಟಮ್ಮ:- ಅಧ್ಯಕ್ಷರೆ, ನಾನು ಬರೆದ ಕೊಟ್ಟಿರುವ ನಿಲುವಳಿ ಸೂಚನೆ ಪ್ರತಿಯಲ್ಲಿ ಸರಿಯಾಗಿ ಬರೆದಿದ್ದೇನೆ. ಬಡವರು ಭೂಮಿ ಇಲ್ಲದವರು ಏನು ತರಿ, ಖುಷ್ಕಿ ಭೂಮಿಯಲ್ಲಿ ಕಾಫಿ ಬೆಳೆದಿದ್ದಾರೆ ಅದನ್ನು ಸಕ್ರಮ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಬಹಳ ಅನಾಹುತ ಆಗುತ್ತದೆ. ಏಕೆಂದರೆ ನನ್ನ ತಾಲ್ಲೂಕಿನಲ್ಲಿ ಸುಮಾರು 16 ಸಾವಿರ ಅರ್ಜಿಗಳು ಇವೆಯೆಂದು ನಾನು ಅದರಲ್ಲಿ ಬರೆದುಕೊಟ್ಟಿದ್ದೇನೆ. ಚಿಕ್ಕಮಗಳೂರಿನಲ್ಲಿ ಎಷ್ಟು ಒತ್ತುವರಿಯಾಗಿದೆ ಅದನ್ನು ಬರೆದುಕೊಟ್ಟಿದ್ದೇನೆ. ಅದು ತಮಗೆ ಮಾಹಿತಿ ಕಳುಹಿಸುವಾಗ ತಪ್ಪು ಬರೆದಿದ್ದಾರೆಂದು ನನಗೆ ಅನಿಸುತ್ತದೆ. ಈ ತಪ್ಪನ್ನು ಸರಿ ಮಾಡಿದರೆ ಮಾತ್ರ ನಾವು ಬಡವರಿಗೆ ಒಂದು ಗುಂಟೆ ಆಲ್ಲಿ ಜಮೀನನ್ನು ಸಕ್ರಮ ಮಾಡಿಕೊಳ್ಳುವುದಕ್ಕೆ ಸಾಧ್ಯ ಇದೆ. ಇಲ್ಲದೆ

ಇದ್ದರೆ ನಾವು ಜನರಿಗೆ ಮೋಸ ಮಾಡಿದಂತೆ ಆಗುತ್ತದೆ. ತಾವು ಇದರ ಬಗ್ಗೆ ಮತ್ತೊಮ್ಮೆ ಮರುಪರಿಶೀಲನೆ ಮಾಡಿ ತಕ್ಷಣ ಒಂದು ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳುತ್ತೇನೆ.

ಅಧ್ಯಕ್ಷರು:- ಶ್ರೀಮತಿ ಸುಮಾವಂಸತ್,

ಶ್ರೀ ಡಿ.ಎ. ಚಿನ್ನಪ್ಪ:- ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು:- ನಾವು ಹೇಳುವುದು ಏನೆಂದರೆ, ಮಾನ್ಯ ಕಂದಾಯ ಸಚಿವರೊಂದಿಗೆ ಮಾತನಾಡಿ ಇದನ್ನು ಫೈನಲ್ ಮಾಡಿ.

ನಿಯಮ 334ರ ಮೇರೆಗೆ

(1) ಬೆಳಗಾಂ ಜಿಲ್ಲೆ ಬೈಲಹೊಂಗಲ ಮತ್ತು ಸೌದತ್ತಿ ತಾಲ್ಲೂಕುಗಳಲ್ಲಿ ವಿದ್ಯುಚ್ಛಕ್ತಿ ತೊಂದರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆ ಬೈಲಹೊಂಗಲ ಮತ್ತು ಸೌದತ್ತಿ ತಾಲ್ಲೂಕುಗಳಲ್ಲಿ ಟ್ರಾನ್ಸ್‌ಫರ್ಮರ್‌ಗಳು ಸುಟ್ಟಿದ್ದು, ಇದರಿಂದಾಗಿ ರೈತರಿಗೆ ತೊಂದರೆಯಾಗಲಿಕ್ಕೆ ಹತ್ತಿರುತ್ತದೆ. ಅಲ್ಲದೆ ಕುಡಿಯುವ ನೀರಿನ ಸರಬರಾಜು ಮಾಡಲೂ ಸಹಾ ಪಿ.ಹೆಚ್.ಇ.ಯವರಿಗೆ ತ್ರಾಸ್ ಆಗಲಿಕ್ಕೆ ಹತ್ತಿರುತ್ತದೆ. ಟ್ರಾನ್ಸ್‌ಫರ್ಮರ್‌ಗಳನ್ನು ಪೂರೈಸಲು ಕೇಳಿದರೆ ಬೆಂಗಳೂರಿನಿಂದ 63 ವೋಲ್ಟೇಜ್ ಮತ್ತು 100 ವೋಲ್ಟೇಜ್‌ನ ಟ್ರಾನ್ಸ್‌ಫರ್ಮರ್‌ಗಳು ಬರುತ್ತಿಲ್ಲ ಎಂದು ಉತ್ತರ ಕೊಡಲಿಕ್ಕೆ ಹತ್ತಿರುತ್ತಾರೆ.

ಇದು ಅಲ್ಲದೆ, ಈ ತಾಲ್ಲೂಕುಗಳಲ್ಲಿ ಐ.ಪಿ.ಸೆಟ್ ಕನೆಕ್ಷನ್ ಕೊಡುವಲ್ಲಿಯೂ ಸಹಾ ತುಂಬಾ ನಿಧಾನವಾಗಲಿಕ್ಕೆ ಹತ್ತಿರುತ್ತಾರೆ. ಕನೆಕ್ಷನ್ ಕೊಡಲು ಕೇಳಿದಾಗ ಉಪಕರಣಗಳನ್ನು ಪೂರೈಸುವಲ್ಲಿ ಬಹಳ ವಿಳಂಬವಾಗುತ್ತದೆಂದು ಉತ್ತರ ಹೇಳುತ್ತಾರೆ.

ಆದಕಾರಣ, ಕೂಡಲೇ ಟ್ರಾನ್ಸ್‌ಫರ್ಮರ್‌ಗಳನ್ನು ಹಾಗೂ ಐ.ಪಿ.ಸೆಟ್ ಉಪಕರಣಗಳನ್ನು ಪೂರೈಸಲು ಆದೇಶ ನೀಡಬೇಕು. ಮತ್ತು ಬೈಲುಹೊಂಗಲ ನಗರದಲ್ಲಿ ವಿದ್ಯುತ್ ಸರಬರಾಜು ಉತ್ತಮ ರೀತಿಯಿಂದ ಮಾಡಲು ಕ್ರಮ ಕೈಗೊಳ್ಳಲು ಆದೇಶ ನೀಡುವುದಾಗಬೇಕು. ಇದು ಅಲ್ಲದೆ, ಸಾದತ್ತಿ ತಾಲ್ಲೂಕು ಯೆಕಿ ರುದ್ರಾಪುರ ತಾಂಡಿಗೆ ಇದುವರೆಗೂ ಎಲೆಕ್ಟ್ರಿಸಿಟಿ ಕೊಟ್ಟಿರುವುದಿಲ್ಲ ಕೂಡಲೇ ಈ ಗ್ರಾಮಕ್ಕೆ ಎಲೆಕ್ಟ್ರಿಸಿಟಿ ಕೊಡಲು ಕ್ರಮ ಕೈಗೊಳ್ಳಬೇಕು ತಮ್ಮ ಮುಖಾಂತರ ಮಾನ್ಯ ವಿದ್ಯುತ್ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ತರಿಸಿಕೊಡುತ್ತೇನೆ.

(2) ಬನ್ನೂರು ಕುರಿ ತಳಿಯ ಅಭಿವೃದ್ಧಿ

ಶ್ರೀ ಎಸ್. ತಮ್ಮಣ್ಣ (ಕೆರಗೋಡು):-ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬನ್ನೂರು ಕುರಿ ತಳಿಯು ಬಹಳ ಉತ್ತಮ ತಳಿಯಾಗಿದ್ದು, ಈ ತಳಿಯು ರೈತನಿಗೆ ವರಪ್ರಧಾನವಾಗಿದ್ದು, ಕುರಿ ಸಾಕಾಣಿಕೆಯಲ್ಲಿ ರೈತನಿಗೆ ಲಾಭದಾಯಕವಾಗಿದ್ದು ಆರ್ಥಿಕವಾಗಿ ಅನುಕೂಲಕರವಾಗಿತ್ತು. ಇತ್ತೀಚಿನ ದಿನಗಳಲ್ಲಿ ಬನ್ನೂರು ಕುರಿತಳಿ ನಶಿಸಿ ಹೋಗುತ್ತಾ ಇದೆ. ಈ ತಳಿಯನ್ನು ಪುನರ್ ಅಭಿವೃದ್ಧಿ ಪಡಿಸುವುದು ಅವಶ್ಯವಾಗಿದೆ. ಈ ದಿಸೆಯಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಂಡು ಬನ್ನೂರು ತಳಿಯನ್ನು ನಶಿಸಿ ಹೋಗದಂತೆ ತಡೆಯಲು ಪರಿಹಾರ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇವೆ.